ಕಿರುಚಿಕೊಂಡ ಸದ್ದೊಂದು ಮುಚ್ಚಿದ್ದ ಕಿಟಕಿ ಬಾಗಿಲುಗಳನ್ನು ಸೀಳಿಕೊಂಡು ನನ್ನ ಕಿವಿಗೆ ಬಂದು ಅಪ್ಪಳಿಸಿತು. ಆ ಸದ್ದು ಅದೆಷ್ಟು ಜೋರಾಗಿತ್ತೆಂದರೆ ನನ್ನಿಡೀ ಮೈ ತತ್ತರಿಸಿ ಮರಗಟ್ಟುವಷ್ಟು! ಒಂದು ಕ್ಷಣ ಏನು ಸದ್ದದು, ಎಲ್ಲಿಂದ ಬಂತೆಂದೇ ಅರ್ಥವಾಗಲಿಲ್ಲ. ಸಟ್ಟನೆ ಓದುವುದನ್ನು ನಿಲ್ಲಿಸಿ, ದಂಗು ಬಡಿದು ಗಾಬರಿಯಿಂದ ಕೋಣೆಯ ಮೂಲೆಗೆ ಸರಿದು ಮುದುರಿ ಕುಳಿತೆ. ಆನಂತರ ಮತ್ಯಾವ ಸದ್ದೂ ಕೇಳಿ ಬರಲಿಲ್ಲ. ನಾ ಕೇಳಿದ್ದು, ಸದ್ದು ಮೂಡಿದ್ದು ನಿಜವೇ ಅಥವಾ ನನ್ನ ಭ್ರಮೆಯೇ ತಿಳಿಯದಷ್ಟು ಎಂದಿನ ಅದೇ ಗಾಢ ಮೌನ, ನಿಶ್ಶಬ್ದ. ಎಷ್ಟೋ ಹೊತ್ತಿನ ನಂತರ ಯಾರದ್ದೋ ಹೆಜ್ಜೆ ಸದ್ದುಗಳು ಮಹಡಿ ಹತ್ತಿ ಬಂದ ಹಾಗೆ, ಮಹಡಿಯ ಮೇಲಿರುವ ಮತ್ಯಾವುದೋ ಕೋಣೆಯೊಳಗೆ ಹೋದ ಹಾಗೆ, ಪಿಸುಪಿಸು ಮಾತನಾಡಿದ ಹಾಗೆ... ಇನ್ನೊಂದು ಕ್ಷಣದಲ್ಲಿ ಅದೇ ಹೆಜ್ಜೆ ಸದ್ದುಗಳು ನನ್ನ ಕೋಣೆ ಸಮೀಪಿಸಿ ಬಾಗಿಲು ಬಡಿಯಬಹುದೆಂದು ಅನ್ನಿಸಿದ್ದೆ ಬಲವಾಗಿ ಕಣ್ಣು ಮುಚ್ಚಿ ಮತ್ತಷ್ಟು ಮೂಲೆಗೆ ಒತ್ತಿಕೊಳ್ಳುತ್ತಾ ಮುದುರಿ ಕುಳಿತೆ. ನನ್ನರಿವಿಗೆ ಬರುವುದಕ್ಕೆ ಮುಂಚೆಯೇ ಬಳ್ಳನೆ ಹೊರ ಬಂದ ಮೂತ್ರ ಅಂಕುಡೊಂಕಾಗಿ ಹರಿಯುತ್ತಾ ನನ್ನ ಸುತ್ತಾ ಸುತ್ತುಗಟ್ಟಿತ್ತು. ನಾನು ಅಕ್ಷರಶಃ ಗಡಗಡ ನಡುಗುತ್ತಿದ್ದೆ. ನನ್ನ ಹಲ್ಲಿನಿಂದ ಬರುತ್ತಿದ್ದ ಕಟಕಟ ಸದ್ದು ನಂಗೇ ಗಾಬರಿ ಹುಟ್ಟಿಸುವಷ್ಟು ಜೋರಾಗಿತ್ತು.

ಅವತ್ತು ಅದು ಹೇಗೆ ನಾ ಬೆಳಕು ಕಂಡೆನೋ ನನಗೇ ಗೊತ್ತಿಲ್ಲ. ಯಾವುದೋ ಒಂದು ಹೊತ್ತಿನಲ್ಲಿ ಎಚ್ಚರವಾಗಿ ನೋಡಿದರೆ ಆಗಲೇ ಬೆಳಗಾಗಿ ಸಾಕಷ್ಟು ಸಮಯವಾದಂತೆ ಕಾಣುತ್ತಿತ್ತು. ಮಲಗಿದ್ದಲ್ಲಿಂದ ಏಳಲಾರದಂತೆ ಕೆಂಡದಂತೆ ಮೈ ಸುಡುತ್ತಿದ್ದ ಜ್ವರ. ಕೋಣೆಯಿಂದ ಹೊರ ಹೋಗುವುದೇ ದುಸ್ಸಾಧ್ಯವೆನ್ನಿಸಿತು. ಕಾಲೇಜಿಗೂ ಹೋಗಲಾಗಲಿಲ್ಲ. ಅಷ್ಟು ದಿನಗಳಲ್ಲಿ ಕಾಲೇಜಿಗೆ ನಾ ಚಕ್ಕರ್ ಹಾಕಿದ್ದು ಅದೇ ಮೊದಲು.

ಸಂಜೆಯಾದರೂ ಅದೇ ಸ್ಥಿತಿ. ಮನೆಯಲ್ಲಿ ನರಪಿಳ್ಳೆಯ ಸುಳಿವಿರಲಿಲ್ಲ. ಮೊದಲ ಬಾರಿಗೆ ಗುಂಯ್‌ಗುಡುವ ಅಸಾಧ್ಯ ಮೌನವನ್ನೇ ಆಲಿಸುತ್ತಾ ಹಾಗೆಯೇ ಮಲಗಿದ್ದೆ. ಯಾವುದೋ ಅನಾಮಧೇಯ ನಿರ್ಜನ ಸ್ಥಳದಲ್ಲಿ ನಾನೊಬ್ಬಳೇ ಏಕಾಂಗಿಯಾಗಿ ಮಲಗಿರುವಂತೆ, ಏಕಾಏಕಿ ಅಪ್ಪ, ಅಮ್ಮ ಎರಡು ದಿನಗಳಿಂದ ಕೋಣೆಯಿಂದ ಹೊರಬಾರದ ನನ್ನನ್ನು ಹುಡುಕಿಕೊಂಡು ಬಂದ ಹಾಗೆ, ಬಾಗಿಲು ಒಡೆದು ನನ್ನನ್ನು ಯಾವುದೋ ಅಪತ್ತಿನಿಂದ ರಕ್ಷಿಸಿ ಸುರಕ್ಷಿತವಾಗಿ ವಾಪಾಸು ಊರಿಗೆ ಕೊಂಡುಹೋದ ಹಾಗೆ ಅರೆಬರೆ ಸ್ವಪ್ನಗಳು, ದುಃಸ್ವಪ್ನಗಳು, ಜ್ವರದ ತಾಪಕ್ಕೆ ತತ್ತರಿಸುತ್ತಿದ್ದ ಮನಸ್ಸಿನಲ್ಲಿ ಮೆಲ್ಲಗೆ ತೆರೆದುಕೊಳ್ಳುತ್ತಿದ್ದ ಭ್ರಾಮಕಲೋಕದೊಳಗೆ ಯಾರೋ ಬಲವಾಗಿ ಬಾಗಿಲು ಬಡೆಯುತ್ತಿರುವ ಸ್ಪಷ್ಟ ಸದ್ದೊಂದು ಕಿವಿಯನ್ನು ಜಾಗೃತಗೊಳಿಸಿತು.

'ಸುಮತೀ, ನಾನು ಆಯವ್ವಾ, ಬಾಗಿಲು ತೆಗೀ!'

ಅದು ಹೇಗೆ ನಾ ಎದ್ದೆ, ಹೋಗಿ ಬಾಗಿಲು ತೆರೆದೆ, ಇಂದಿಗೂ ಅಚ್ಚರಿಯೇ. ಕುರ್ಚಿಯನ್ನು ಪ್ರಯಾಸದಿಂದ ಸರಿಸಿ, ಬಾಗಿಲು ತೆರೆದವಳೇ ಹೊಸ್ತಿಲ ಮೇಲೆ ಕುಸಿದು ಬಿದ್ದೆ. ಬಾಗಿಲಾಚೆ ನಿಂತಿದ್ದ ಆಯವ್ವನ ಮುಖಚರ್ಯೆದಲ್ಲಿ ಮೊದಲ ಬಾರಿ ಸಣ್ಣ ಗಾಬರಿಯೊಂದು ಹೌದೋ ಅಲ್ಲವೋ ಎಂಬಂತೆ ಮೂಡಿದ್ದು ಕಂಡ ನೆನಪು.

ಒಂದೇ ಒಂದೂ ಮಾತನಾಡದೆ ಮರುಕ್ಷಣವೇ ಅವಳು ನನ್ನನ್ನೆತ್ತಿ ತನ್ನ ಭುಜದ ಮೇಲೆ ಆನಿಸಿಕೊಂಡು, ಮತ್ತೊಂದು ಕೈಯಿಂದ ನನ್ನ ಸೊಂಟವನ್ನು ಬಲವಾಗಿ ಬಳಸಿ ಹಿಡಿದುಕೊಂಡು ಮೆಲ್ಲಗೆ ಮೆಟ್ಟಲಿಳಿಸಿಕೊಂಡು ಸೀದಾ ಬಚ್ಚಲುಮನೆಗೆ ಕರೆದುಕೊಂಡು ಹೋದಳು. ನಿಲ್ಲಲೂ ಸಾಧ್ಯವಾಗದಷ್ಟು ನಿತ್ರಾಣಳಾಗಿದ್ದೆ. ಹೆಚ್ಚೂಕಮ್ಮಿ ನನ್ನನ್ನವಳು ಎತ್ತಿಕೊಂಡೇ ಹೋದಳೆಂದರೂ ಸರಿ. ಅಷ್ಟೆಲ್ಲಾ ಅಗಾಧ ಶಕ್ತಿ ಅವಳಲ್ಲಿ ಇರಬಹುದೆನ್ನುವುದೂ ಇನ್ನಿಲ್ಲದಷ್ಟು ಅಚ್ಚರಿ ತಂದ ಸಂಗತಿ. ಆದರೆ ನನ್ನ ಮನಸ್ಸು ಯಾವುದನ್ನೂ ಯೋಚಿಸುವ ಸ್ಥಿತಿಯಲ್ಲಿರಲಿಲ್ಲ. ಬಚ್ಚಲುಮನೆಯ ಹೊಂಡದಲ್ಲಿ ನನ್ನನ್ನು ಕೂರಿಸಿ, ಮಲಮೂತ್ರಗಳಿಂದ ಮಲಿನವಾಗಿದ್ದ ನನ್ನ ಬಟ್ಟೆಗಳನ್ನು ಅವಳೇ ಕಳಚಿದಳು. ಹಾಗೆ ಮತ್ತೊಬ್ಬರ ಮುಂದೆ ನಗ್ನಳಾಗಿ ಕುಳಿತಿದ್ದು ಅದೇ ಮೊದಲು. ಸಂಕೋಚದಿಂದ ಹಿಡಿಯಾಗಿ ಹೋಗಿದ್ದೆ. ಬಾಲ್ದಿಯಲ್ಲಿದ್ದ ಬಿಸಿನೀರನ್ನು ತಂಬಿಗೆಯಲ್ಲೆತ್ತಿ ಸುರಿಯುತ್ತಾ, ಗಲೀಜಾಗಿದ್ದ ನನ್ನ ಮೈಯನ್ನು ಯಾವುದೋ ಸೋಪಿನಿಂದ ಗಸಗಸ ಉಜ್ಜಿ ತೊಳೆಯುತ್ತಾ ನಿಧಾನವಾಗಿ ಸ್ನಾನ ಮಾಡಿಸಿದಳು.